**ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ**

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

(2)

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ    ದಿನಾಂಕ : DATE : 19/12/20

# ಶಾಸಕರ ಗುದ್ದಾಟಕ್ಕೆ ಕಾರ್ಯದರ್ಶಿಗೆ ಸಭಾಪತಿ ನೋಟಿಸ್

- ಅಂದು ನಿಯಂತ್ರಣ ತಪ್ಪಿದ್ದ ಮೇಲ್ಮನೆ ಕಲಾಪ
- ನೋಟಿಸ್‌ಗೆ ಕಾರ್ಯದರ್ಶಿಯಿಂದ ವಿವರಣೆ
- ವಿಧಾನಪರಿಷತ್‌ನಲ್ಲಿ ಭಾರೀ ಗದ್ದಲ ಪ್ರಕರಣ

ಸಂ.ಕ,ಸಮಾಚಾರ ಬೆಂಗಳೂರು 19-12-20

ವಿಧಾನಪರಿಷತ್‌ನ ಒಂದು ದಿನದ ವಿಶೇಷ ಅಧಿವೇಶನದಲ್ಲಿ ಶಾಸಕರ ಗುದ್ದಾಟಕ್ಕೆ ಸಂಬಂಧಿಸಿದಂತೆ ಕರ್ತವ್ಯ ನಿರ್ಲಕ್ಷತೆ ಆರೋಪದ ಹಿನ್ನೆಲೆಯಲ್ಲಿ ಮೇಲ್ಮನೆ ಕಾರ್ಯದರ್ಶಿಗೆ ಸಭಾಪತಿ ಪ್ರತಾಪಚಂದ್ರಶೆಟ್ಟಿ ವಿವರಣೆ ಕೇಳಿ ನೋಟಿಸ್ ಜಾರಿಗೊಳಿಸಿದ್ದಾರೆ.

ಡಿ.15ರ ಮಂಗಳವಾರದಂದು ಸದಸ್ಯರು ನಡೆಸಿದ ಗದ್ದಲ ಸಂಬಂಧ ಕರ್ತವ್ಯ ನಿರ್ಲಕ್ಷ್ಯ ತೋರಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಪರಿಷತ್‌ನ ಕಾರ್ಯದರ್ಶಿಗೆ ಎರಡು ಪುಟಗಳ ಪತ್ರ ಬರೆದಿರುವ ಸಭಾಪತಿ ಕೆ.ಪ್ರತಾಪ್‌ಚಂದ್ರ ಶೆಟ್ಟಿ ಅವರು, ಕರ್ತವ್ಯ ನಿರ್ಲಕ್ಷ್ಯ ತೋರಿ ರುವ ತಮ್ಮ ಮೇಲೆ ಕ್ರಮ ಜರುಗಿಸುವ ಕುರಿತಂತೆ 48 ಗಂಟೆಯೊಳಗೆ ಅಗತ್ಯ ದಾಖಲೆಗಳೊಂದಿಗೆ ವಿವರಣೆ ನೀಡುವಂತೆ ಡಿ.16ರಂದೇ ಸೂಚನೆ ನೀಡಿದ್ದಾರೆ.

ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ನಿಯಮ ಬಾಹಿರವಾಗಿ, ಬೇಜವಾಬ್ದಾರಿ ಮತ್ತು ಕರ್ತವ್ಯ ನಿರ್ಲಕ್ಷ್ಯತನ ತೋರಿ ವಿಧಾನಮಂಡಲದ ಘನತೆಗೆ ಚ್ಯುತಿ ತಂದ ಹಿನ್ನೆಲೆ ಮತ್ತು ಅಧಿಕಾರ ವ್ಯಾಪ್ತಿಗೆ ಮೀರಿದ ಕಾರ್ಯ ನಿರ್ವಹಣೆ ಕುರಿತಂತೆ ಕರ್ನಾಟಕ ನಾಗರಿಕ ಸೇವಾ( ವರ್ಗೀಕರಣ ನಿಯಂತ್ರಣ ಮೇಲ್ಮನವಿ) ನಿಯಮಾವಳಿ ಪ್ರಕಾರ ನಿಮ್ಮ ವಿರುದ್ಧ (ಕಾರ್ಯದರ್ಶಿ) ಏಕೆ ಕ್ರಮ ಜರುಗಿಸಬಾರದು ಎಂದು ಸಭಾಪತಿ ಪ್ರಶ್ನಿಸಿದ್ದಾರೆ.




## ನಿಯಂತ್ರಣ ತಪ್ಪಿದ್ದ ಕಲಾಪ

ನೋಟಿಸ್‌ಗೆ ವಿವರಣೆ ನೀಡಿರುವ ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮೀ ಅವರು ಅಂದು ಅಧಿವೇಶನದ ಬೆಲ್ ನಿಲ್ಲುವ ಮುನ್ನವೇ ಉಪಸಭಾಪತಿಗಳು ಪೀಠದಲ್ಲಿ ಆಸೀನರಾದರು. ಕೆಲವೇ ಕ್ಷಣಗಳಲ್ಲಿ ಉಭಯ ಕಡೆಯ ಸದಸ್ಯರು ಪೀಠದತ್ತ ಧಾವಿಸಿದರು. ಇದಾದ ಬಳಿಕ ಅನಿರೀಕ್ಷಿತ ಘಟನೆಗಳಿಗೆ ಕಲಾಪ ಸಾಕ್ಷಿಯಾಯಿತು. ಇಡೀ ಕಲಾಪ ಸಂಸದೀಯ ವ್ಯವಸ್ಥೆಯ ನಿಯಂತ್ರಣ ತಪ್ಪಿತ್ತು. ಹಾಗಿದ್ದೂ ಸಿಬ್ಬಂದಿ ಸಹಕಾರದಿಂದ ಸದನವನ್ನು ನಿಯಂತ್ರಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ತನ್ನಿಂದ ಯಾವುದೇ ನಿಯಮ ಉಲ್ಲಂಘನೆಯಾಗಿಲ್ಲ ಎಂದೂ ವಿವರಣಾತ್ಮಕ ವರದಿ ನೀಡಿದ್ದಾರೆಂದು ಹೇಳಲಾಗಿದೆ.